**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು**

**ಸಿ.ಸಿ. ನಂ. 759/2024**

**ಸಿ.ಡಬ್ಲ್ಯೂ :5**
**ಪಿ.ಡಬ್ಲ್ಯೂ :8**

**ದಿಃ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | **: ಕುಮಾರ್** |
| **ತಂದೆ ಹೆಸರು** | **: ಬೋರಪ್ಪ** |
| **ವಯಸ್ಸು** | **: 50 ವರ್ಷ** |
| **ಉದ್ಯೋಗ** | **: ಚಾಲಕ** |
| **ವಾಸ ಸ್ಥಳ** | **: ಕೊಂಡ್ಲಿಘಟ್ಟ** |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಈ ಕೇಸಿನಲ್ಲಿ ಏನೂ ಗೊತ್ತಿಲ್ಲ. ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ನನ್ನ ಸ್ನೇಹಿತ ಚಾಸಾ-4 ರವರು ಕೋಡಿ ಸರ್ಕಲ್ ಬಳಿ ಕುಳಿತಿದ್ದಾಗ ಪೊಲೀಸರು ಅಲ್ಲಿಗೆ ಬಂದು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಇಷ್ಟನ್ನು ಹೊರತು ಪಡಿಸಿ ನನಗೆ ಈ ಪ್ರಕರಣದಲ್ಲಿ ಏನೂ ಗೊತ್ತಿಲ್ಲ. ನನಗೆ ಪೊಲೀಸರು ಯಾವುದೇ ನೋಟೀಸು ನೀಡಿರುವುದಿಲ್ಲ. ಸಾಕ್ಷಿಯು ಪಂಚರಿಗೆ ನೀಡಲಾದ ತಿಳುವಳಿಕೆ ಪತ್ರದಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿದ್ದು ತಿಳುವಳಿಕೆ ಪತ್ರವನ್ನು ನಿಪಿ-16 ಎಂದು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹರಜ್ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಮತ್ತು 16 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಓದಿ ಹೇಳಿಲ್ಲ. ನಿಪಿ-3 ರ ಛಾಯಾಚಿತ್ರವನ್ನು ನಿಪಿ-2 ಕ್ಕೆ ಸಹಿ ಪಡೆದುಕೊಳ್ಳುವಾಗ ಪೊಲೀಸರು ತೆಗೆದಿರುತ್ತಾರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಚಾಸಾ-4 ರವರು

ಈಗ ಮರಣ ಹೊಂದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-2 ಮತ್ತು 16 ಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ-**

ದಿಃ 11-03-2024 ರಂದು ರಾತ್ರಿ 1-20 ಗಂಟೆ ಸಮಯದಲ್ಲಿ ಚಾಸಾ-1 ರವರು ಪ್ರಯಾಣಿಸುತ್ತಿದ್ದ ಕೆ. ಎಸ್. ಆರ್.ಟಿ.ಸಿ ಬಸ್ ನ ಚಾಲಕನು ತನ್ನ ಬಸ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ತಿಪಟೂರಿನ ಕೋಡಿ ವೃತ್ತದ ಬಳಿ ಅಚಾನಕ್ ಆಗಿ ಬ್ರೇಕ್ ಹಾಕಿದಾಗ ಒಳಭಾಗದಲ್ಲಿ ಕುತಿಳಿದ್ದ ಚಾಸಾ-1 ರವರು ಬಿದ್ದು ಪೆಟ್ಟು ಮಾಡಿಕೊಂಡ ಹಿನ್ನಲೆಯಲ್ಲಿ ಸ್ಥಳ ಪಂಚನಾಮೆಗಾಗಿ ಅದೇ ದಿನ ಮಧ್ಯಾಹ್ನ 12-30 ಗಂಟೆಗೆ ಪೊಲೀಸರು ನಾನು ಈಗ ಓದಿಸಿ ಕೇಳಿಸಿಕೊಂಡ ನಿಪಿ-16 ರ ಪ್ರಕಾರ ನನಗೆ ಮತ್ತು ಚಾಸಾ-4 ರವರಿಗೆ ನೋಟೀಸ್ ನೀಡಿ ನಂತರ ಈಗ ಓದಿಸಿ ಕೇಳಿಸಿಕೊಂಡ ನಿಪಿ-2 ರ ಪ್ರಕಾರ ಚಾಸಾ-1 ರವರು ತೋರಿಸಿದ ಕೃತ್ಯ ಸ್ಥಳದ ಮಹಜರನ್ನು ಸ್ಥಳದಲ್ಲಿ ನಮ್ಮ ಸಮಕ್ಷಮ ಜರುಗಿಸಿ ಅದೇ ಸಮಯದಲ್ಲಿ ನಿಪಿ-3 ರ ಪ್ರಕಾರ ಛಾಯಾ ಚಿತ್ರ ಪಡೆದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.